**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–01)**

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ, 34) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ಅಧಿನಿಯಮ, 2022ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು

**2. ಅನುಸೂಚಿಯ ತಿದ್ದುಪಡಿ.-** ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ ( 1957ರ ಕರ್ನಾಟಕ ಅಧಿನಿಯಮ 34) ಅನುಸೂಚಿಯಲ್ಲಿ 20ನೇ ಅನುಚ್ಛೇದದ (3)ನೇ ಅಂಕಣದಲ್ಲಿನ ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಈ ಅಧಿನಿಯಮಕ್ಕೆ ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ನೋಂದಾಯಿಸಿದ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘದಿಂದ ಹಂಚಿಕೆಯಾದ ನಿವೇಶನದ ಸಂಬಂಧದಲ್ಲಿ ಭೋಗ್ಯ ಮತ್ತು ಮಾರಾಟ ಕರಾರು ಮಾಡಿಕೊಂಡಿದ್ದು, ಅಂಥ ಕರಾರಿನ ಮುಂದುವರಿಕೆಗಾಗಿ ತರುವಾಯದ ಹಸ್ತಾಂತರಣ ಪತ್ರವನ್ನು ಮಾಡಿಕೊಂಡಿದ್ದರೆ, ಅಂಥ ಹಸ್ತಾಂತರಣ ಪತ್ರದ ಮೇಲೆ ಪಾವತಿಸಬೇಕಾದ ಸುಂಕವು ಭೋಗ್ಯ ಮತ್ತು ಮಾರಾಟ ಕರಾರನ್ನು ಬರೆದುಕೊಟ್ಟ ದಿನಾಂಕದಂದು ಇದ್ದ ಅಂಥ ನಿವೇಶನದ ಮಾರುಕಟ್ಟೆ ಮೌಲ್ಯದ ಮೇಲೆ ಇರತಕ್ಕದ್ದು".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ನೋಂದಾಯಿಸಿದ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನ ಹಂಚಿಕೆದಾರನಿಗೆ ಅಂಥ ಭೋಗ್ಯ ಮತ್ತು ಮಾರಾಟ ಕರಾರಿನ ಮುಂದುವರಿಕೆಯ ತರುವಾಯ ಮಾಡಿಕೊಂಡ ಹಸ್ತಾಂತರಣ ಪತ್ರದ ಮೇಲಿನ ಕರಾರನ್ನು ಮಾಡಿಕೊಂಡ ದಿನಾಂಕದಂದು ಇದ್ದ ಅಂಥ ನಿವೇಶನದ ಮಾರುಕಟ್ಟೆ ಮೌಲ್ಯದ ಮೇಲೆ ಸ್ಟಾಂಪು ಶುಲ್ಕ ಪಾವತಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಸ್ಟಾಂಪು ಅಧಿನಿಯಮ 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಅಂದಾಜು ಐದರಿಂದ ಆರು ಕೋಟಿ ರೂಪಾಯಿಗಳ ವಾರ್ಷಿಕ ಹಣಕಾಸು ಕೊರತೆಯನ್ನು ಒಳಗೊಂಡಿರಲಿದೆ.

**ಆರ್. ಅಶೋಕ್**
ಕಂದಾಯ ಸಚಿವರು

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ
## ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ( 1957ರ ಕರ್ನಾಟಕ ಅಧಿನಿಯಮ, 34) ಉದ್ಧೃತ ಭಾಗ

**xx xx xx**

| | | |
|---|---|---|
| 20. | ಹಸ್ತಾಂತರಣ ಪತ್ರ.- (1) 2ನೇ ಪ್ರಕರಣದ (ಡಿ) ಖಂಡದ ಮೂಲಕ ಪರಿಭಾಷಿಸಿದಂತೆ ಸಂ.52ರ ಅಡಿಯಲ್ಲಿ ವಿಧಿಸಲಾದ ಅಥವಾ ವಿನಾಯಿತಿಗೊಳಿಸ ಲಾದ ವರ್ಗಾವಣೆಯಾಗಿರದ, ಹಸ್ತಾಂತರಣವು ಯಾವ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಹಸ್ತಾಂತರಣದ ವಸ್ತು ವಿಷಯವಾಗಿದೆಯೋ ಆ ಸ್ವತ್ತು ಈ ಕೆಳಗೆ ನಮೂದಿಸಿದವುಗಳ ಪರಿಮಿತಿ ಯೊಳಗೆ ಇದ್ದರೆ.- | ಮೌಲ್ಯದ ಶೇಕಡ ಐದರಷ್ಟು<br><br>**xxxx**<br><br>**xxxx**<br><br>ಪರಂತು, ಒಂದು ಗೇಣಿ ಹಾಗೂ ಮಾರಾಟ ಒಪ್ಪಂದವನ್ನು ಬರೆದುಕೊಡಲಾದ ಯಾವುದೇ ಸಂದರ್ಭದಲ್ಲಿ ಮತ್ತು 5ನೇ ಅನುಚ್ಛೇದದ (ಡಿಎ) ಬಾಬಿನ ಅಡಿಯಲ್ಲಿ ಅಂಥ ಒಪ್ಪಂದಗಳಿಗಾಗಿ ಅಗತ್ಯಪಡಿಸಲಾದ ಮೌಲ್ಯಾನುಸಾರ ಸ್ಟಾಂಪು ಹಾಕಲಾಗಿದ್ದಲ್ಲಿ ಮತ್ತು ಅಂಥ ಒಪ್ಪಂದದ ಅನುಸರಣೆಯಲ್ಲಿ ಒಂದು ಹಸ್ತಾಂತರಣ ಪತ್ರವನ್ನು ತರುವಾಯ ಬರೆದು ಕೊಡಲಾದರೆ, ಅಂಥ ಹಸ್ತಾಂತರಣ ಪತ್ರದ ಮೇಲಿನ ಸುಂಕವು ಐವತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ ಅಥವಾ ಹಸ್ತಾಂತರಣ ಪತ್ರದ ಮೇಲೆ ಸಂದಾಯವಾಗುವ ಸುಂಕದ ವ್ಯತ್ಯಾಸ ಮತ್ತು 5ನೇ ಅನುಚ್ಛೇದದ (ಡಿಎ) ಬಾಬಿನ ಅಡಿಯಲ್ಲಿ ಭದ್ರತಾ ಠೇವಣಿಗಾಗಿ ಈಗಾಗಲೇ ಸಂಗ್ರಹಿಸಲಾದ ಸುಂಕ ಇವರೆಡರಲ್ಲಿ ಯಾವುದು ಅಧಿಕವೋ ಅದನ್ನು ಮೀರತಕ್ಕದ್ದಲ್ಲ.<br><br>**xx xx xx**<br><br>"ಮತ್ತು ಪರಂತು ಈ ಅಧಿನಿಯಮಕ್ಕೆ ವಿರುದ್ಧವಾದುದು ಏನೇ ಒಳಗೊಂಡಿದ್ದರೂ, 2001ನೇ ಮಾರ್ಚ್ ಮೂವತ್ತೊಂದನೇ ದಿನಾಂಕದ ಮೊದಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ( 1959ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ನೋಂದಾಯಿಸಿದ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘದಿಂದ ಹಂಚಿಕೆಯಾದ ನಿವೇಶನದ ಸಂಬಂಧದಲ್ಲಿ ಭೋಗ್ಯ ಮತ್ತು ಮಾರಾಟ ಕರಾರು ಮಾಡಿಕೊಂಡಿದ್ದು, ಅಂಥ ಕರಾರಿನ ಮುಂದುವರಿಕೆಗಾಗಿ ತರುವಾಯದ ಹಸ್ತಾಂತರಣ ಪತ್ರವನ್ನು ಮಾಡಿಕೊಂಡಿದ್ದರೆ, ಅಂಥ ಹಸ್ತಾಂತರಣ ಪತ್ರದ ಮೇಲೆ ಪಾವತಿಸಬೇಕಾದ ಸುಂಕವು ಭೋಗ್ಯ ಮತ್ತು ಮಾರಾಟ ಕರಾರನ್ನು ಬರೆದುಕೊಟ್ಟ ಅಂಥ ದಿನಾಂಕದಂದು ಇದ್ದಂತೆ ನಿವೇಶನದ ಮಾರುಕಟ್ಟೆ ಮೌಲ್ಯ ಆಗಿರತಕ್ಕದ್ದು". |

**xx xx xx**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 14ನೇ ಫೆಬ್ರವರಿ 2021